# ಡಾ. ಬಿ. ಆರ್. ಅಂಬೇಡ್ಕರವರ ದೃಷ್ಟಿಕೋನದಲ್ಲಿ ಮಹಿಳಾ ಸಬಲೀಕರಣ

**ಸುಧೀರ. ಎಸ್. ನಡುವಿನಮನಿ**

ಉಪನ್ಯಾಸಕರು, ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ಬನಹಟ್ಟಿ.

DOI: https://doi.org/10.5281/zenodo.17297204

## ABSTRACT:

ಮಹಿಳಾ ಸಬಲೀಕರಣ ಎನ್ನುವುದು ಮಹಿಳೆಯರನ್ನು ಹಳೆಯ ಸಮಾಜದಿಂದ ಹೊರಗಡೆ ತಂದು ಮಹಿಳೆಯರಿಗೆ ಸ್ವಾತಂತ್ರ್ಯ, ಸಮಾನತೆ, ಗೌರವ ನೀಡುವುದು. ಸಬಲೀಕರಣವು ಡಾ. ಬಿ. ಆರ್. ಅಂಬೇಡ್ಕರವರ ದೃಷ್ಟಿಯಲ್ಲಿ ಒಂದು ಮಹತ್ವವಾದ ಹೆಜ್ಜೆಯನ್ನು ಹಾಕುವುದು ಆಗಿತ್ತು. ಮಹಿಳೆಯರಿಗಾಗಿ ಸಂವಿಧಾನದ ಮೂಲಭೂತ ಹಕ್ಕುಗಳ ಮೂಲಕ ಹಲವಾರು ಹಕ್ಕುಗಳನ್ನು ಜಾರಿಗೆ ತಂದರು. ಅಲ್ಲದೆ ಮಹಿಳೆಯರಿಗೆ ವಿಶೇಷವಾದ ಆಸ್ತಿ ಹಕ್ಕು (ಹಿಂದೂ ಕೋಡ್ ಬಿಲ್) ಜಾರಿಗೆ ತಂದಿದ್ದರು. ಪ್ರಾಚೀನ ಕಾಲದಲ್ಲಿ ಮಹಿಳೆಯರ ಮೇಲೆ ಎಸಗುವ ಕೃತ್ಯಗಳಿಗೆ ಕಡಿವಾಣ ಹಾಕಿ ಕಾನೂನು ಕ್ರಮಗಳನ್ನು ಅನುಸರಿಸಿ ಮಹಿಳೆಯರಿಗೆ ಶಿಕ್ಷಣ, ಸಂಘಟನೆ, ಹೋರಾಟ ತತ್ವದ ಮಾರ್ಗವನ್ನು ಅಳವಡಿಸಿಕೊಳ್ಳುವಂತೆ ಕರೆ ನೀಡಿದರು. ಡಾ. ಬಿ. ಆರ್. ಅಂಬೇಡ್ಕರ್ ಅವರು ಸಮಾಜದಲ್ಲಿ ಸಮಾನತೆ, ನ್ಯಾಯ ಮತ್ತು ಹಕ್ಕುಗಳ ಪರಿಪೂರ್ಣ ರಕ್ಷಕರೆಂದು ಪರಿಗಣಿಸಲ್ಪಟ್ಟ ವ್ಯಕ್ತಿ. ಅವರ ದೃಷ್ಟಿಕೋನದಲ್ಲಿ ಮಹಿಳಾ ಸಬಲೀಕರಣ ಕೇವಲ ಮಹಿಳೆಯರ ಅಭಿವೃದ್ಧಿಯೇ ಅಲ್ಲ, ಅದು ಸಮಾಜದ ಒಟ್ಟಾರೆ ಪ್ರಗತಿಯ ಪ್ರಮುಖ ಅಂಶವಾಗಿದೆ. ಅಂಬೇಡ್ಕರ್ ಅವರ ಶಿಕ್ಷಣ, ಹಕ್ಕು ಮತ್ತು ಶಕ್ತಿ ಕುರಿತ ನಿಟ್ಟಿನ ಪ್ರತಿಪಾದನೆಗಳು, ಮಹಿಳೆಯರಿಗೆ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಶೈಕ್ಷಣಿಕ ಸ್ವಾತಂತ್ರ್ಯ ನೀಡುವತ್ತ ಗಮನ ಹರಿಸುತ್ತವೆ.

## KEYWORDS:

ಅಸ್ಪೃಶ್ಯತೆ, ಹಿಂದೂ ಕೋಡ್ ಮಸೂದೆ, ಥ್ಯಾಕರ್ಸ (ಮೈದಾನ), ಕೃತ್ಯ, ದಹನ, ದೇವದಾಸಿ.

**ಪೀಠಿಕೆ**

ಅಂಬೇಡ್ಕರವರು ಮಹಿಳಾ ವಿಮೋಚನೆ ಮತ್ತು ಸಬಲೀಕರಣಕ್ಕೆ ಸಂಬಂಧಿಸಿದಂತೆ ಹಲವಾರು ಕಾರ್ಯಗಳನ್ನು ಮಾಡಿದ್ದಾರೆ. ಇವರು ಅನೇಕ ವರ್ಷಗಳ ಕಾಲ ತಮ್ಮ ಜೀವನದ ಬಹುಭಾಗವನ್ನು ಇತರರ ಪರವಾಗಿ ಮುಡಿಪಿಟ್ಟಿದ್ದಾರೆ. ಅಲ್ಲದೆ ಸ್ತ್ರೀ ಕುರಿತಾದ ವಿಶೇಷ ಕಾಳಜಿ, ಚಿಂತನೆಗಳನ್ನು ಮಾಡಿದ್ದಾರೆ. ಇವುಗಳು ಸಂವಿಧಾನಾತ್ಮಕ ರಕ್ಷಣೆಯಲ್ಲಿ ಕಾಣಬಹುದಾಗಿದೆ. ಮಹಿಳಾ ಸಬಲೀಕರಣವು ಮಹಿಳೆಯರಿಗೆ ಸ್ವತಂತ್ರ, ಸ್ಥಾನಮಾನ, ಗೌರವ ಮತ್ತು ಆರ್ಥಿಕವಾಗಿ ಬಲಗೊಳಿಸುವ ಉದ್ದೇಶವನ್ನು ಡಾ. ಬಿ. ಆರ್. ಅಂಬೇಡ್ಕರ್ ಅವರು ಹೊಂದಿದ್ದರು. ಈ ನಿಟ್ಟಿನಲ್ಲಿ ಮಹಿಳೆಯರ ಕುರಿತಾಗಿ ಕಾರ್ಯಗಳನ್ನು ಮಾಡಲು ಆರಂಭಿಸಿದರು. ಅಂಬೇಡ್ಕರ್ ಅವರು ನಾನಾ ಉದ್ದೇಶಪೂರ್ವಕ ಸತ್ಯಗಳು ಮತ್ತು ಬೋಧನೆಗಳ ಮೂಲಕ ಮಹಿಳೆಯರು ಸ್ವಾತಂತ್ರ್ಯ, ಗೌರವ ಮತ್ತು ಸಮಾನತೆಯೊಂದಿಗೆ ಬದುಕಬೇಕು ಎಂಬ ಸಂದೇಶವನ್ನು ಸಾರಿದ್ದಾರೆ. ಮಹಿಳಾ ಸಬಲೀಕರಣವು ಬಾಧ್ಯತೆಯನ್ನೂ

ಜವಾಬ್ದಾರಿಯನ್ನೂ ಹೊಂದಿರುವ ಪ್ರಕ್ರಿಯೆ, ಮತ್ತು ಸಮಾನ ಸಮಾಜದ ನಿರ್ಮಾಣಕ್ಕೆ ಅವಶ್ಯಕವಾಗಿದೆ. ಅಂಬೇಡ್ಕರ್ ದೃಷ್ಟಿಯಲ್ಲಿ ಮಹಿಳಾ ಸಬಲೀಕರಣ ಅಂದರೆ ನ್ಯಾಯ, ಸಮಾನತೆ ಮತ್ತು ಶಕ್ತಿಯೊಂದಿಗೆ ಭವಿಷ್ಯವನ್ನು ರೂಪಿಸುವ ಪವಿತ್ರ ಹಾದಿ.

**ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಲು ಕಾರಣಗಳು**

1. ಸತಿ ಸಹಗಮನ ಪದ್ಧತಿ
2. ವೈದಿಕ ಆಚರಣೆಗಳು
3. ದೇವದಾಸಿ ಪದ್ಧತಿ
4. ಬಾಲ್ಯ ವಿವಾಹ
5. ಶಿಕ್ಷಣದಿಂದ ವಂಚಿತ
6. ಮನುಸ್ಮೃತಿ, ನಾರದಸ್ಮೃತಿ
7. ಸಾಮಾಜಿಕ ನ್ಯಾಯ
8. ಆತ್ಮ ಗೌರವ ಮತ್ತು ಸ್ವಾಭಿಮಾನ ಇಲ್ಲದಿರುವಿಕೆ
9. ಆರ್ಥಿಕ ಸ್ವಾತಂತ್ರ್ಯ ಇಲ್ಲದಿರುವಿಕೆ
10. ಶೈಕ್ಷಣಿಕ ಹಕ್ಕುಗಳಿಂದ ವಂಚಿತ
11. ಲಿಂಗ ಸಮಾನತೆ
12. ಜಾತಿ ಅಸಮಾನತೆ

ಮಹಿಳಾ ಸಬಲೀಕರಣಕ್ಕೆ ಡಾ. ಬಿ.ಆರ್. ಅಂಬೇಡ್ಕರವರು ಕೈಗೊಂಡ ಕಾರ್ಯಗಳು

ಅಂಬೇಡ್ಕರವರು ಮೊದಲಬಾರಿಗೆ ಕ್ರಿ.ಶ. 1927ರಲ್ಲಿ ಬಾಂಬೆ ವಿಧಾನ ಪರಿಷತ್ತಿಗೆ ಆಯ್ಕೆಯಾದರು. ಇಲ್ಲಿನ ವಿಧಾನ ಪರಿಷತ್ತಿನ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಹಲವಾರು ಕಾರ್ಯಗಳನ್ನು ಮಾಡಿದರು. ಅಂದರೆ ಮಹಿಳಾ ಸಮಸ್ಯೆಗೆ ಸಂಬಂಧಿಸಿದಂತೆ ಹಲವಾರು ಸ್ಥಳಗಳಲ್ಲಿ ಭಾಷಣಗಳನ್ನು ಮಾಡಿದರು. ಮಹಿಳೆಯರಿಗೆ ಸ್ಪಂದಿಸುವಂತೆ ಅವರ ಮನಗಳನ್ನು ಒಲಿಸಿದರು. ಇವರು ತಮ್ಮ ಭಾಷಣದಲ್ಲಿ ಮಹಿಳೆಯರಿಗೆ ದೊರೆಯಬೇಕಾದ ಸೌಲಭ್ಯಗಳಾದ, ಹೆರಿಗೆ ಸಂಬಂಧಿಸಿದ ಸೌಲಭ್ಯಗಳು ಮತ್ತು ಹುಟ್ಟಿನ ನಿಯಂತ್ರಣ ಹಾಗೂ ಮಹಿಳೆಯರಿಗೆ ವಿಶೇಷ ಗೌರವಕ್ಕೆ ಸಂಬಂಧಿಸಿದಂತೆ ಹೆಚ್ಚು ಗಮನಗಳನ್ನು ನೀಡಿದ್ದಾರೆ. ಅಸ್ಪೃಶ್ಯ ಎಂಬ ಈ ಪದವು ಮಹಿಳೆಯರನ್ನು ಮತ್ತು ಸಮಾಜವನ್ನು ತುಳಿಯುವ ಕಾರ್ಯವನ್ನು ಮಾಡಿದೆ. ಹೀಗಾಗಿ ವೈದಿಕ ಸಂಸ್ಕೃತಿಯ ಈ ಆಚರಣೆಯು ಸಮಾಜ ಘಾತಕವಾಗಿದೆ. ಪುರುಷನಷ್ಟು ಮಹಿಳೆಯೂ ಕೂಡ ಸ್ವತಂತ್ರಳು ಮತ್ತು ಸಮಾನಳು ಎಂಬ ಮೊದಲ ಸತ್ಯವನ್ನು ಸಮಾಜಕ್ಕೆ ತೋರಿದ ಏಕೈಕ ನಾಯಕ ಅಂಬೇಡ್ಕರವರು. ಹೀಗಾಗಿ ಸ್ವತಂತ್ರ ಮತ್ತು ಸಮಾನಳಾಗಿರಲು ಮಹಿಳೆಯರು ಮೊದಲು ಅಕ್ಷರ ಜ್ಞಾನ ಪಡೆಯಬೇಕೆಂದು ಕಡ್ಡಾಯ ಶಿಕ್ಷಣವನ್ನು ಸಂವಿಧಾನದಲ್ಲಿ ವಿಧಿವತ್ತಾಗಿ ಜಾರಿಗೆ ತಂದಿರುತ್ತಾರೆ.

ಮಹಿಳೆಯರ ಸ್ವಾತಂತ್ರ್ಯ ಬದುಕಿಗೆ ಅಡ್ಡಿಯಾಗಿರುವ ಮತ್ತು ಮಹಿಳೆಯರನ್ನು ಕತ್ತಲ ಯುಗಕ್ಕೆ ತಳ್ಳುತ್ತಿರುವ ಮನುಸ್ಮೃತಿಯನ್ನು ಮುಂಬೈನ ಮಹಾಡ್‌ನಲ್ಲಿ ನಡೆದ ನಿಮ್ನ ವರ್ಗಗಳ ಸಮ್ಮೇಳನದಲ್ಲಿ 1927ರ ಡಿಸೆಂಬರ್ 25 ರಂದು ಅಗ್ನಿ ಸ್ಪರ್ಶ ಮಾಡುವುದರ ಮುಖಾಂತರವಾಗಿ

ಅದನ್ನು ದಹಿಸಿದರು. ನಂತರ ಮಹಿಳಾಪರ, ಸಮಾನತೆ ಪರ, ಮಾನವತಾ ಪರ, ಸಮಾಜ ಪರ ಪುನರ್ ನಿರ್ಮಾಣಕ್ಕೆ ಅಡಿಪಾಯ ಹಾಕಿರುವುದನ್ನು ನೋಡಬಹುದಾಗಿದೆ. ಭಾರತ ದೇಶದಲ್ಲಿ ಧರ್ಮ ಮತ್ತು ದೇವರು ಹಾಗೂ ಸಮಾಜದ ಹೆಸರಲ್ಲಿ ಮಹಿಳೆಯರನ್ನು ದೇವದಾಸಿಯರನ್ನಾಗಿ ಮಾಡಿ ಅವರನ್ನು ಶ್ರೀಮಂತ ವರ್ಗದ ಪುರುಷರು ಭೋಗದ ವಸ್ತುವನ್ನಾಗಿ ಮಾಡಿಕೊಳ್ಳುತ್ತಿರುವ ಈ ಸಂಗತಿಯನ್ನು ತಿಳಿದು ಇದನ್ನು ಪಾಪದ ಕೃತ್ಯ ಎಂದು ಬಲವಾಗಿ ತಿಳಿದರು. ಹೀಗಾಗಿ 1936 ರಲ್ಲಿ ಮುಂಬೈನ ದಾದೋದರ ಥ್ಯಾಕರ್ಸ ಮೈದಾನದಲ್ಲಿ ಮಹಿಳೆಯರ ಕುರಿತು ಈ ರೀತಿ ಹೇಳಿದರು: "ತಾವು ಹೀನಾಯ ಜೀವನವನ್ನು ತೊರೆಯಬೇಕು. ಬದುಕಿನ ವಿಧಾನಗಳನ್ನು ಬದಲಾಯಿಸಿಕೊಳ್ಳಬೇಕು. ಹಣವನ್ನು ಗಳಿಸಲು ನೂರಾರು ಮಾರ್ಗಗಳಿವೆ. ನಿಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳಿ ಸಹೋದರಿಯರೇ. ಈ ಪಾಪದ ಕೃತ್ಯದಲ್ಲಿ ಭಾಗಿಯಾಗಬೇಡಿ, ಜೀವನವು ಉತ್ತಮವಾಗಿರಬೇಕು" ಎಂದು ಹೇಳಿದರು.

ನಾಗಪುರದಲ್ಲಿ ಅಸ್ಪೃಶ್ಯರ ಮಹಿಳೆಯರ ಕುರಿತಾಗಿ 1942 ಜುಲೈ 20 ರಂದು ಈ ರೀತಿ ಮಾತನಾಡಿದರು. ಕೆಟ್ಟ ಗುಣಗಳಿಂದ ದೂರವಿರಿ, ಸ್ವಚ್ಛಂದ ಬದುಕನ್ನು ಕಟ್ಟಿಕೊಳ್ಳಿ. ನಿಮ್ಮ ಗಂಡನ ಹೆಗಲಿಗೆ ಹೆಗಲು ಕೊಟ್ಟು ಆತನ ಕೆಲಸದಲ್ಲಿ ಭಾಗಿಯಾಗಿ. ನಿಮ್ಮ ಪಾಪದ ಕೆಲಸಕ್ಕೆ ದೇವರು ಕಾರಣ ಅಲ್ಲ, ನೀವೇ ಕಾರಣ. ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ. ಸ್ವಾಭಿಮಾನದ ಬದುಕು ಮಹಿಳೆಯರ ಉದ್ಧಾರ ಎಂದು ಹೇಳಿದರು. ಅಂಬೇಡ್ಕರವರು ಮಹಿಳೆಯರನ್ನು ಮಾನವೀಯ ನೆಲೆಯಲ್ಲಿ ಗಟ್ಟಿಗೊಳಿಸುವ ಹಿನ್ನೆಲೆಯಲ್ಲಿ ಒಂದು ವಿಶೇಷವಾದ ಮಹತ್ವದ ಕಾರ್ಯವನ್ನು ಮಾಡಿದರು. ಅದು ಹಿಂದೂ ಕೋಡ್ ಮಸೂದೆ. ಇದನ್ನು 1951 ಫೆಬ್ರವರಿ 5 ರಂದು ಮಂಡಿಸಿದರು. ಇದು ತನ್ನದೇ ಆದ ಕೆಲವು ಅಂಶಗಳನ್ನು ಒಳಗೊಂಡಿತ್ತು.

**1. ವಿವಾಹ ಸಂಬಂಧಿತ ಅಂಶಗಳು**

**2. ದತ್ತು ತೆಗೆದುಕೊಳ್ಳಲು ಮಹಿಳೆಯರಿಗೂ ಹಕ್ಕು**

**3. ಹೆಣ್ಣಿಗೆ ಆಸ್ತಿ ಹಕ್ಕು**

**4. ತಂದೆ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೆ ಪಾಲು**

ಈ ರೀತಿಯಾದ ಅಂಶ ಒಳಗೊಂಡಿತ್ತು. ಈ ಮಸೂದೆ ಹಿಂದೂ ಸಮುದಾಯದಲ್ಲಿ ಆಳವಾದ ವಿರೋಧಕ್ಕೆ ಒಳಪಟ್ಟಿತ್ತು. ಹೀಗಾಗಿ 1951 ರಲ್ಲಿ ಅಂಬೇಡ್ಕರವರು ಸಚಿವ ಸ್ಥಾನಕ್ಕೂ ರಾಜೀನಾಮೆ ನೀಡಿದರು. ಇದಕ್ಕೆ ರಾಜಕೀಯ ಕುತಂತ್ರವೂ ಕಾರಣವಾಗಿದೆ.

ಹಿಂದೂ ಕೋಡ್ ಮಸೂದೆ ಭಾಗವಾಗಿ ಜಾರಿಗೆ ಬಂದ ಪ್ರಮುಖ ಕಾಯಿದೆಗಳು:

**1. HINDU MARRIAGE ACT 1955**

**2. HINDU SUCCESSION ACT 1956**

**3. HINDU MINORITY AND GUARDIANSHIP ACT 1956**

**4. HINDU ADOPTIONS AND MAINTENANCE ACT 1956**

**ಡಾ. ಬಿ. ಆರ್. ಅಂಬೇಡ್ಕರ್ ಅವರ ಅಭಿಪ್ರಾಯ – ಮಹಿಳೆಯರ ಚುನಾವಣೆ**

ಭಾರತ ಸಂವಿಧಾನದ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಅವರು ಮಹಿಳಾ ಸಬಲೀಕರಣದ ಬಲವಾದ ಧ್ವನಿಯಾಗಿ ಗುರುತಿಸಲ್ಪಟ್ಟಿದ್ದಾರೆ. ಅವರ ದೃಷ್ಟಿಯಲ್ಲಿ,

ರಾಜಕೀಯ ಹಕ್ಕುಗಳು ಮಹಿಳೆಯರ ನಿಜವಾದ ಮುಕ್ತಿಗಾಗಿ ಅತೀ ಅಗತ್ಯ.

**1. ಮಹಿಳೆಯರ ಮತದಾನದ ಹಕ್ಕು**

ಅಂಬೇಡ್ಕರ್ ಅವರು ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಒದಗಿಸುವ ನಿಟ್ಟಿನಲ್ಲಿ, ಸರ್ವ ಸಾಮಾನ್ಯ ಮತದಾನದ ಹಕ್ಕು (Universal Adult Franchise)ನ್ನು ಸಂವಿಧಾನದಲ್ಲಿ ಅಳವಡಿಸಿದರು. ಮಹಿಳೆಯರಿಗೂ ಪುರುಷರಂತೆ ಸಮಾನವಾಗಿ ಮತದಾನ ಮಾಡಲು ಹಾಗೂ ಚುನಾವಣೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿದರು.

**2. ಮಹಿಳೆಯರ ರಾಜಕೀಯ ಪ್ರತಿನಿಧಿತ್ವ**

ಅವರು ಮಹಿಳೆಯರು ಕೇವಲ ಮತದಾರರಾಗಿಯೇ ಉಳಿಯದೆ, ಸಕ್ರಿಯ ರಾಜಕೀಯ ನಾಯಕರು ಆಗಬೇಕು ಎಂದು ಅಭಿಪ್ರಾಯಪಟ್ಟರು. ಚುನಾವಣೆಗಳ ಮೂಲಕ ಮಹಿಳೆಯರು ಶಾಸನಮಂಡಲ, ಸಂಸತ್ತು ಮುಂತಾದ ಸ್ಥಾನಗಳಲ್ಲಿ ಭಾಗವಹಿಸಿದಾಗ ಮಾತ್ರ ನಿಜವಾದ ಸಮಾನತೆ ಸಾಧ್ಯವೆಂದು ಒತ್ತಿ ಹೇಳಿದರು.

**3. ಸಮಾನತೆಯ ಭರವಸೆ**

ಅಂಬೇಡ್ಕರ್ ಅವರ ಸಂವಿಧಾನ ರೂಪಣೆಯ ಮೂಲಕ ಮಹಿಳೆಯರು ರಾಜಕೀಯ ಹಕ್ಕುಗಳನ್ನು ಪಡೆದು ಸಾಮಾಜಿಕ ಮತ್ತು ಆರ್ಥಿಕ ಹಕ್ಕುಗಳಿಗೂ ಬಾಗಿಲು ತೆರೆದವು. ಅವರ ದೃಷ್ಟಿಯಲ್ಲಿ, ಮಹಿಳೆಯರ ರಾಜಕೀಯ ಹಕ್ಕುಗಳಿಲ್ಲದ ಸಮಾಜದಲ್ಲಿ ನಿಜವಾದ ಪ್ರಜಾಪ್ರಭುತ್ವ ಸಾಧ್ಯವಿಲ್ಲ. ಡಾ. ಬಿ. ಆರ್. ಅಂಬೇಡ್ಕರ್ ಅವರ ಅಭಿಪ್ರಾಯ ಪ್ರಕಾರ, ಮಹಿಳೆಯರ ಚುನಾವಣೆ ಹಾಗೂ ಮತದಾನದ ಹಕ್ಕುಗಳು ಕೇವಲ ಕಾನೂನುಸಮ್ಮತ ಅವಕಾಶವಲ್ಲ, ಅದು ಸಮಾನತೆ, ನ್ಯಾಯ ಮತ್ತು ಸಬಲೀಕರಣದ ಹಾದಿಯ ಪ್ರಮುಖ ಹಂತ. ಮಹಿಳೆಯರ ಚುನಾವಣಾ ಹಕ್ಕು ಅಂದರೆ, ಪ್ರಜಾಪ್ರಭುತ್ವದ ನಿಜವಾದ ಅಸ್ತಿತ್ವಕ್ಕೆ ಬುನಾದಿ.

**ಉಪಸಂಹಾರ**

ಭಾರತವನ್ನು ಒಂದು ಸುವ್ಯವಸ್ಥಿತವಾಗಿಸಲು ಸಮಾನತೆ, ಸ್ವಾತಂತ್ರ್ಯ, ಮಹಿಳಾ ಪರ ವಿಶೇಷ ಕಾಳಜಿ ಹಾಗೂ ಶೋಷಿತರ ಬದುಕನ್ನು ಶ್ರೀಮಂತಗೊಳಿಸಲು ಹಲವಾರು ವಿಭಿನ್ನ ಆಯಾಮಗಳಲ್ಲಿ ಹೋರಾಡಿದರು. ನಂತರದಲ್ಲಿ ಭಾರತಕ್ಕೆ ಬಂದ ಸಂವಿಧಾನ ಎಂಬ ಗ್ರಂಥವನ್ನು ನೀಡಿದರು. ಇದರಿಂದ ಕಾನೂನಾತ್ಮಕ ವ್ಯವಸ್ಥೆ ಕಲ್ಪಿಸಿದರು. ಇವರ ಹೋರಾಟದ ಫಲಶ್ರುತಿಯಿಂದ ಮಹಿಳೆಯರಿಗೆ ಶಿಕ್ಷಣ, ಉದ್ಯೋಗ, ಚುನಾವಣೆಗಳಲ್ಲಿ ಮೀಸಲಾತಿ ದೊರಕುವುದನ್ನು ಕಾಣಲಾಗಿದೆ. ಇವುಗಳೆಲ್ಲವೂ ಅಂಬೇಡ್ಕರವರ ಹೋರಾಟದ ಫಲಶ್ರುತಿ ಎನ್ನಲಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಮರ್ಜಿ. ಸ., (2022), ಡಾ. ಬಿ. ಆರ್. ಅಂಬೇಡ್ಕರ್ ವೀಸಾದ ನಿರೀಕ್ಷೆಯಲ್ಲಿ ನೆನಪುಗಳು. ಲಡಾಯಿ ಪ್ರಕಾಶನ, ಗದಗ.
2. ನ್ಯಾಯಮೂರ್ತಿ ನಾಗಮೋಹನದಾಸ್. ಹೆಚ್. ಎನ್., (2022) ಸಂವಿಧಾನ ಮತ್ತು ವಚನಗಳು, ನವ ಕರ್ನಾಟಕದ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್.
3. ಪರಿಹಾರ. ಎಂ. ಎಲ್., ಅಂಬೇಡ್ಕರ್ ಅವರ ಜೀವನ ಮತ್ತು ಸಂದೇಶ, ವಾಸನ ಪಬ್ಲಿಕೇಶನ್.
4. Singh. S. N., (2016), Dr. B. R. Ambedkar On Women Empowerment, Publisher, Regal Publications.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.